# ಪ್ರಶ್ನಾಂಕಣ

## ‘ಕ್ವಯಿಪು’ – ಅದೇನು?


‘ದಪ್ಪನಾದ ಒಂದು ಹುರಿ. ಅದಕ್ಕೆ ಬೇರೆ ಬೇರೆ ದೂರಗಳಲ್ಲಿ ಕಟ್ಟಿದ ಭಿನ್ನ ಭಿನ್ನ ವರ್ಣಗಳ ದಾರಗಳು. ಪ್ರತಿ ದಾರದಲ್ಲೂ ಬೇರೆ ಬೇರೆ ದೂರಗಳಲ್ಲಿ ಗಂಟುಗಳು. ಹೀಗೆ ಗಂಟು ಗಂಟುಗಳ ಹಲವಾರು ದಾರಗಳ ಗುಚ್ಛ’ – ಅದೇ ಕ್ವಯಿಪು (ಚಿತ್ರ ನೋಡಿ).

ಹಾಗೆಂದು ಅದು ಮಕ್ಕಳಾಟದ ದಾರಗಳ ಗಂಟು ಎಂದು ಭಾವಿಸಿಬಿಡಬೇಡಿ. ವಾಸ್ತವವಾಗಿ ಅದು ಬಹು ಪುರಾತನ ನಾಗರಿಕತೆಯೊಂದರ ಸಾಮ್ರಾಜ್ಯದ ಬಹು ಮಹತ್ವದ ದಾಖಲೆ. ಹಾಗಾಗಿ ಪ್ರಾಚೀನ ನಾಗರಿಕತೆಗಳಿಗೆ ಸಂಬಂಧಿಸಿದ ಮಡಿಕೆ–ಕುಡಿಕೆ, ನಾಣ್ಯ, ಶಿಲಾಶಾಸನ, ಓಲೆಗರಿ ಕಡತ ಇತ್ಯಾದಿಗಳಷ್ಟೇ ಅಥವಾ ಇನ್ನೂ ಅಧಿಕ ವಿಶಿಷ್ಟ ವಿಸ್ಮಯಕರ ಅವಶೇಷ.

ವಾಸ್ತವ ಏನೆಂದರೆ ಈಗ್ಗೆ ಹದಿನೈದು ಶತಮಾನಗಳಷ್ಟು ಹಿಂದಿನ ಕಾಲದಲ್ಲಿ, ದಕ್ಷಿಣ ಅಮೆರಿಕದ ಆ್ಯಂಡಿಸ್ ಪರ್ವತ ಪ್ರದೇಶದಲ್ಲಿ ನಾಗರಿಕ ಸಾಮ್ರಾಜ್ಯವೊಂದು ನೆಲೆಸಿತ್ತು. ‘ಇಂಕಾ ನಾಗರಿಕತೆ’ ಎಂದೇ ಇತಿಹಾಸದಲ್ಲಿ ಸುಪ್ರಸಿದ್ಧವಾಗಿರುವ, ಇಬ್ಬನೇ ಅರಸನ ಆಳ್ವಿಕೆಯಲ್ಲಿದ್ದ ಆ ಚಕ್ರಾಧಿಪತ್ಯ ಏಳು ಲಕ್ಷ ಚದರ ಕಿ.ಮೀ. ವಿಸ್ತಾರಕ್ಕೆ ಹರಡಿತ್ತು; ಸುಮಾರು ಒಂದು ಕೋಟಿ ಜನಸಂಖ್ಯೆಯನ್ನು ಹೊಂದಿತ್ತು. ಸಮೀಪ ಒಂದು ನೂರು ಬುಡಕಟ್ಟುಗಳ, ಇಪ್ಪತ್ತು ವಿಭಿನ್ನ ಭಾಷೆಗಳ ಜನರ ಆ ‘ರಾಷ್ಟ್ರ’ ಸಮೃದ್ಧವಾಗಿದ್ದು ಅಲ್ಲಿ ತುಂಬ ಯಶಸ್ವೀ ಆಡಳಿತ ನಡೆದಿತ್ತು.

ಆದರೆ ವಿಸ್ಮಯ ಏನೆಂದರೆ ಇಡೀ ಇಂಕಾ ಸಾಮ್ರಾಜ್ಯದಲ್ಲಿ ಯಾರಿಗೂ ಓದು–ಬರೆಹ ತಿಳಿದಿರಲಿಲ್ಲ. ಭಾಷಾ ಲಿಪಿ, ಸಂಖ್ಯಾ ಲಿಪಿಗಳಿರಲಿ, ಚಿತ್ರ ಲಿಪಿ ಕೂಡ ಅಲ್ಲಿ ಬಳಕೆಯಲ್ಲಿರಲಿಲ್ಲ. ಅದಕ್ಕೇ ಅಲ್ಲಿನ ಆಗಿನ ರಾಜನ ಆಸ್ಥಾನದ ಕೆಲ ಬುದ್ಧಿವಂತ ಜನ ರಾಜ್ಯದ ಸರ್ಕಾರದ ಸಕಲ ಮಾಹಿತಿಗಳನ್ನು, ಅಂಕಿ–ಅಂಶಗಳನ್ನು ದಾಖಲಿಸಲು ವಿಶಿಷ್ಟ ಕ್ರಮವೊಂದನ್ನು ಆವಿಷ್ಕರಿಸಿ ಬಳಕೆಗೆ ತಂದರು. ಅದೇ ‘ಕ್ವಯಿಪು’; ದಾರ–ಗಂಟುಗಳಲ್ಲಿ ಅಂಕಿ ಅಂಶಗಳನ್ನು ದಾಖಲಿಸುವ ಅದ್ಭುತ ವಿಧಾನ ಅದು. ಸಾಮ್ರಾಜ್ಯದ ಜನಸಂಖ್ಯೆ, ಪ್ರತಿ ವರ್ಷ ಉತ್ಪಾದನೆಯಾದ ದವಸ–ಧಾನ್ಯ, ವಸೂಲಾದ ಕಂದಾಯ, ರಾಜ್ಯ ಕೋಶದ ಆದಾಯ–ವ್ಯಯಗಳ, ಚಿನ್ನ–ಬೆಳ್ಳಿ ದಾಸ್ತಾನಿನ ವಿವರ... ಹೀಗೆಲ್ಲ ಪ್ರತಿ ಮಾಹಿತಿಗೂ ಒಂದು ಕ್ವಯಿಪು. ಉದಾಹರಣೆಗೆ ಧಾನ್ಯಗಳ ಮಾಹಿತಿಗೆ ಒಂದು ಹಳದಿ ಹುರಿ. ಅದಕ್ಕೆ ಸಾಲಾಗಿ ಕಟ್ಟಿದ ದಾರಗಳು ವಿವಿಧ ಪ್ರಾಂತ್ಯಗಳ ಸೂಚಕ. ಅಂತಹ ಪ್ರತಿ ದಾರದ ಗಂಟುಗಳ ಸ್ಥಾನಗಳು ನಿರ್ದಿಷ್ಟ ಪ್ರಮಾಣಗಳ ಸೂಚಕ. ಹಾಗೆ ಪ್ರತಿ ಕ್ವಯಿಪು, ಅದರ ಪ್ರತಿ ದಾರದ ಬಣ್ಣ–ಗಂಟುಗಳು ಎಲ್ಲಕ್ಕೂ ತುಂಬ ನಿರ್ದಿಷ್ಟ ಮೌಲ್ಯ, ಅರ್ಥ. ಸ್ಪಷ್ಟವಾಗಿಯೇ ಕ್ವಯಿಪುಗಳನ್ನು ತಯಾರಿಸಲು– ಓದಲು ವಿಶೇಷ ತರಬೇತು ಪಡೆದ ನಿಷ್ಣಾತ ನೌಕರರೇ ಇದ್ದರು. ಎಂಥ ಕ್ರಮ! ಅಲ್ಲವೇ?






ಎಡದಿಂದ ಬಲಕ್ಕೆ:

1. ಅಲ್ಲಿನ ದೂರ ಸಂಪರ್ಕ ವ್ಯವಸ್ಥೆ ತೃಪ್ತಿಕರವಾಗಿದೆ (4)
3. ಆತನದು ಅಕ್ಷರಶಃ ಮೇಲೇರುವ ಕೆಲಸ (3)
4. ತಕ್ಷಣಕ್ಕಷ್ಟೇ; ದೀರ್ಘಕಾಲಿಕ ಅಲ್ಲ (3)
6. ವಾನರರನ್ನೆಲ್ಲ ಕೂಡಿಹಾಕಿದ ಭೂ ಪ್ರದೇಶ ಹೇಗೆ? (4)
7. ಭಾವೈಕ್ಯ ಪ್ರದರ್ಶಿಸಲು ಅದ್ದೂರಿ ಆಡಂಬರ (3)
9. ಆಯವ್ಯಯದಲ್ಲಿ ಖರ್ಚಾಗದ ಉಳಿದಿದ್ದೇನು? (3)
11. ಹೂರಣ ಮಾರಿ ಗಳಿಸಿದ್ದು ಹಣ–ನಾಣ್ಯ (3)
13. ಕೇಳರಿಯದಷ್ಟು ಭಯಂಕರ (3)
15. ಅನ್ಯರ ಕೆಲಸ, ಸ್ವಲ್ಪವೂ ಶ್ರಮವಿಲ್ಲ (4)
17. ನರಳುತ್ತಿದ್ದವರಿಗೆಲ್ಲ ಆತನೇ ಆಶ್ರಯ ನೀಡಿದ (3)
18. ಜೊತೆಗಾರರಿಗಾಗಿ ಕೊಂಡು ತಂದದ್ದು ಈ ರಾಜಲೋಹ (3)
19. ಕರಾಳ ಕೆಲಸಗಳಿಗೆ ಕಾರಣವಾದದ್ದು ಕೌರವ ವಂಶ (4)

ಮೇಲಿಂದ ಕೆಳಕ್ಕೆ:

1. ಹೀಗೆ ಹಾಸಿದ್ದನ್ನೆಲ್ಲ ಸರಿಪಡಿಸಲು ತುಂಬ ತಾಳ್ಮೆ ಬೇಕು (3)
2. ಆರತಕ್ಷತೆಯ ಕಾರ್ಯ ಕಾಪಾಡುವವನೇ ತಲೆ ಕೆಳಗು (3)
3. ಎಂಥ ಅಬ್ಬರದೊಡನೆ ಶುರುವಾಯಿತು ನೋಡಿ (3)
5. ಕಾತುರವೇಕೆ? ಅದು ಮಾಡಲೇಬೇಕಾದ ಕೆಲಸ (3)
7. ದೈವವೇ ಹಿರಿದೆಂದು ನಿರೂಪಿಸಿದವಳು ಸೀತೆಯೇ ತಾನೇ? (3)
8. ವರುಣನ ಕೃಪೆ ಬೇಡಿದವ ಅತ್ಯಂತ ಶ್ರೇಷ್ಠ (3)
9. ಅನ್ಯರ ಕೆಲಸಗಳೇ ಹಲವಾರು (3)
10. ಮಳೆಯಲ್ಲೇ ಕಂಡದ್ದು ಅದೆಂಥ ಜೋಡಿ? (3)
12. ವೈರಿಗಳನ್ನೆಲ್ಲ ಬೇರೆಡೆಗೆ ಸಾಗಿಸಿದರೇ? (3)
14. ಮುಹೂರ್ತಕ್ಕೆ ಸರಿಯಾಗಿ ಹಾಜರಾದ ಕುದುರೆ ಸವಾರ (3)
15. ಆಳುವ ಕೆಲಸವೆಂದರೆ ಭಯ, ಹಿಂಜರಿತ (3)
16. ಅವಸರ ಬೇಕಿಲ್ಲ, ಅದರಲ್ಲಿ ಸ್ವಲ್ಪವೂ ವಕ್ರತೆ ಇಲ್ಲ (3)

■ ಎನ್. ವಾಸುದೇವ್

### ಪದಬಂಧ 17–10–2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಸ್ಥಿರತೆ; 3. ಸಂಕಷ್ಟ; 4. ಪಲ್ಲಟ; 6. ಮಿತಾಹಾರ; 7. ವಾರಸು; 9. ಹುಲುಸು; 11. ಕಬೀರ. 13. ತುರಗ; 15. ಹರಿದಾಸ; 17. ಸುಹಾಸ; 18. ಮಿನುಗು; 19. ನುಡಿಮುತ್ತು.

ಮೇಲಿಂದ ಕೆಳಕ್ಕೆ:

1. ಅಷ್ಟಮಿ; 2. ತೆಪರ; 3. ಸಂಹಾರ; 5. ಟಪಾಲು; 7. ವಾಸ್ತವಿಕ; 8. ಸುಕುಮಾರ; 9. ಹುಸಿಮಾತು; 10 ಸುರಸಂಗ; 12. ಬೀಳಿಸು; 15. ಹಸನು; 16. ಸಮಿತ್ತು; 14. ‘ರಡಾಗು’ (ಗುಡಾರ ತಲೆ ಕೆಳಗು).